ದಿನಾಂಕ 19-11-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮೇಡಮ್ ಪಿ. ಕೆ. ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ನೀಡಿರುವ ಮಾಹಿತಿ ಮೇರೆಗೆ ತಯಾರಿಸಿದ್ದು, ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ.

ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ಮಾಹಿತಿಯ ಯಥಾಪ್ರತಿ |
| ನಿಪಿ-2 | ಎಫ್.ಐ.ಆರ್ ನ ಯಥಾಪ್ರತಿ |
| ನಿಪಿ-3 | ಸ್ಥಳ ಪಂಚನಾಮೆಯ ಯಥಾಪ್ರತಿ |
| ನಿಪಿ-4 | ಗಾಯದ ಪ್ರಮಾಣ ಪತ್ರದ ಯಥಾಪ್ರತಿ |
| ನಿಪಿ-5 | ಐ.ಎಂ.ವಿ. ವರದಿಯ ಯಥಾಪ್ರತಿ |
| ನಿಪಿ-6 | ಎ. ಐ. ಆರ್ ವರದಿಯ ಯಥಾಪ್ರತಿ |
| ನಿಪಿ-7 | ಅಂತಿಮ ವರದಿಯ ಯಥಾಪ್ರತಿ |
| ನಿಪಿ-8 | ಕಚ್ಚಾ ನಕ್ಷೆಯ ಯಥಾಪ್ರತಿ |

| | |
|---|---|
| ನಿಪಿ-9 | ದಿಃ 26-11-2023 ರ ಆಸ್ಪತ್ರೆ ಬಿಡುಗಡೆ ಚೀಟಿ, |
| ನಿಪಿ-10 | ಅಂಗನ್ಯೂನ್ಯತೆಯ ಪ್ರಮಾಣ ಪತ್ರ. |
| ನಿಪಿ-11 | ದಿಃ 26-11-2023 ರ ಐ. ಪಿ. ಬಿಲ್ಲು |
| ನಿಪಿ-12 | ವೈದ್ಯಕೀಯ ಬಿಲ್ಲುಗಳು(ಒಟ್ಟು 33) |
| ನಿಪಿ-13 | ನೋಟರೀಯವರಿಂದ ದೃಡೀಕರಿಸಲಾದ ಆಧಾರ್ ಕಾರ್ಡ್ |

ನಿಪಿ 10 ನ್ನು ಎರಡನೇ ಎದುರುದಾರರ ಗೌರವಾನ್ವಿತ ವಕೀಲರ ತಕರಾರಿಗೆ ಮತ್ತು ರುಜುವಾತಿನ ಶರತ್ತಿಗೆ ಒಳಪಟ್ಟು ಗುರುತಿಸಲಾಯಿತು.

ನಿಪಿ 13 ದಾಖಲೆಯ ಮೂಲಪ್ರತಿಯನ್ನು ಪಡೆದು ಹೋಲಿಕೆ ಮಾಡಿ ಮೂಲಪ್ರತಿಯನ್ನು ಹಿಂತಿರುಗಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ 2 ನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.